


**11** ಕಾಕಭುಷುಂಡಿಯು ಶ್ರೀರಾಮನ ಜೀವನ ವೃತ್ತಾಂತವನ್ನು ಗರುಡನಿಗೆ ವಿವರಿಸಿ ಹೇಳಿದನು. ಆ ಕಥೆಗಳನ್ನು ಆಲಿಸಿದ ಗರುಡನ ಅಹಂಕಾರ ನುಚ್ಚುನೂರಾಯಿತು.




**12** ನೀನೊಬ್ಬ ದೊಡ್ಡ ವಿದ್ವಾಂಸ. ಹಾಗೆಯೇ ಗಾಢವಾದ ಭಕ್ತಿಯನ್ನು ಕೂಡ ಹೊಂದಿದ್ದೀಯೆ. ಹೀಗೇಕೆ ಕಾಗೆಯ ರೂಪದಲ್ಲಿ ಇರುವೆ?




**13** ವೈಕುಂಠದಲ್ಲಿ,




**14** ಕೈಲಾಸದಲ್ಲಿ, ಭಗವಾನ್ ಶಿವ ಮತ್ತು ಪಾರ್ವತಿಯರು ಗರುಡನ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ.




ಈ ಕಥೆ ತುಳಸೀ ರಾಮಾಯಣದಲ್ಲಿ ಬರುತ್ತದೆ.

ಸುದ್ದಿ ಸಂಚಯ

# ಬೆಂಗಳೂರಿನಲ್ಲಿ ಹರಿದು ಬಂದ ಯುವಶಕ್ತಿಯ ಸಾಗರ




ಸ್ವಾಮಿ ವಿವೇಕಾನಂದರ ೧೫೦ನೇ ಜನ್ಮಜಯಂತಿಯನ್ನು ಕರ್ನಾಟಕದಾದ್ಯಂತ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ೨೦೧೩ರ ಜನವರಿ ೧೨ರ ಯುವದಿನವನ್ನು, ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ, ಜಿಲ್ಲಾ ಕೇಂದ್ರಗಳಲ್ಲಿ ಯುವ ಸಮಾವೇಶಗಳು (ಜನವರಿ ೧೧ರಂದು) ಮತ್ತು ಜಾಥಾಗಳ ಮೂಲಕ (ಜನವರಿ ೧೨ರಂದು) ವಿಜೃಂಭಣೆಯಿಂದ ನಡೆಸಲಾಯಿತು. ಹಾಗೆಯೇ



೭ ಜನವರಿ ೨೦೧೩ ರಿಂದ ೧೨ ಜನವರಿ ೨೦೧೩ರವರೆಗೆ ಕರ್ನಾಟಕದ ಎಲ್ಲ ಶಾಲಾಕಾಲೇಜುಗಳಲ್ಲಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅನೇಕ ಬಗೆಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಡೆದವು. ಈ ಎಲ್ಲ ಕಾರ್ಯಕ್ರಮಗಳಲ್ಲಿ ವಿವೇಕಾನಂದರ ಸಂದೇಶವುಳ್ಳ 'ವಿದ್ಯುತ್ ವಾಣಿ' ಪುಸ್ತಕ ಮತ್ತು 'ಸ್ವಾಮಿ ವಿವೇಕಾನಂದರ ಚಿತ್ರವುಳ್ಳ ಕ್ಯಾಲೆಂಡರ್ ಕಾರ್ಡ್' ಅನ್ನು ಲಕ್ಷಾಂತರ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಲಾಯಿತು. ಜಿಲ್ಲಾ ಮಟ್ಟದ ಮೆರವಣಿಗೆಗಳಲ್ಲಿ ಭಾಗವಹಿಸಿದ ಎಲ್ಲರಿಗೂ ಸ್ವಾಮಿ ವಿವೇಕಾನಂದರ ಚಿತ್ರವಿರುವ ಟಿ-ಷರ್ಟ್ ಮತ್ತು ಕ್ಯಾಪ್‌ಗಳನ್ನು ವಿತರಿಸಲಾಯಿತು. ಹೀಗೆ ಇಡೀ ಕರ್ನಾಟಕದಲ್ಲಿ ವಿವೇಕಾನಂದರ ಭಾರೀ ಅಲೆ ಎದ್ದಿದ್ದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು.

ಈ ಎಲ್ಲ ಕಾರ್ಯಕ್ರಮಗಳಿಗೆ ಶಿಖರಪ್ರಾಯವಾಗಿ ಬೆಂಗಳೂರಿನ ರಾಮಕೃಷ್ಣ ಮಠವು ೨೦೧೩, ಜನವರಿ ೧೨ರಂದು ಕಾಲೇಜು ವಿದ್ಯಾರ್ಥಿಗಳಿಗೆ ಬೃಹತ್ ಯುವ ಸಮಾವೇಶವನ್ನು ಏರ್ಪಡಿಸಿತ್ತು. ಇದರ ಉದ್ದೇಶ, ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಪರಿಚಯಿಸುವುದರ ಮೂಲಕ, ಯುವಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವುದೇ ಆಗಿತ್ತು. ಬೆಂಗಳೂರಿನ ರಾಮಕೃಷ್ಣ ಮಠವು ಜರುಗಿಸಿದ ಅತ್ಯಂತ ಬೃಹತ್ ಪ್ರಮಾಣದ ಸಮ್ಮೇಳನ ಇದಾಗಿದ್ದು, ನಗರದ ಸುಮಾರು ೨೦೦ ಕಾಲೇಜುಗಳಿಂದ ಬಂದಿದ್ದ ೩೫,೦೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿಸಿದ ಈ ಐತಿಹಾಸಿಕ ಸಮಾವೇಶಕ್ಕಾಗಿ ಸುಮಾರು ೧,೦೦೦ ಸ್ವಯಂಸೇವಕರು ಹಗಲಿರುಳೂ ದುಡಿದಿದ್ದಾರೆ. ಆಶ್ರಮದ ಹತ್ತಿರವಿರುವ ಬಸವನಗುಡಿ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಈ ಸಮಾವೇಶ ಸುಸಜ್ಜಿತವಾಗಿ ಆಯೋಜನೆಗೊಂಡಿತ್ತು.

ಬೆಳಗ್ಗೆ ೯.೩೦ಕ್ಕೆ ವೇದಘೋಷ ಮತ್ತು ಭಜನೆಗಳಿಂದ ಕಾರ್ಯಕ್ರಮ ಆರಂಭಗೊಂಡಿತು. ಆಶ್ರಮದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಮತ್ತು ಕರ್ನಾಟಕ ರಾಜ್ಯದ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ದೀಪ ಬೆಳಗಿಸುವ ಮೂಲಕ ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಅನಂತರ ಸ್ವದೇಶ ಮಂತ್ರ ಪಠಣ, ಸ್ವಾಮಿ ವಿವೇಕಾನಂದರ ಸಂದೇಶಗಳ ವಾಚನ ನಡೆಯಿತು. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಮತ್ತು ಅವರು ಯುವಜನರಿಗೆ ಹೇಗೆ ಆದರ್ಶವಾಗಿದ್ದಾರೆ ಎನ್ನುವ ಅಂಶವನ್ನು ಒತ್ತಿಹೇಳಿದರು. ಅನಂತರ ಪ್ರಸಿದ್ಧ ಶಿಕ್ಷಣತಜ್ಞರಾದ ಡಾ. ಗುರುರಾಜ ಕರ್ಜಗಿ ಅವರು **'ಸ್ವಾಮಿ ವಿವೇಕಾನಂದ – ಪ್ರಾಚ್ಯ ಮತ್ತು ಪಾಶ್ಚಾತ್ಯ ಚಿಂತನೆಯ ಸಂಗಮ'** – ಈ ವಿಚಾರವಾಗಿ ಭಾಷಣ ಮಾಡಿದರು. ಪರಮಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ಚಾರಿತ್ರ್ಯ ನಿರ್ಮಾಣದ ಬಗೆಗಿನ ಸ್ವಾಮಿ ವಿವೇಕಾನಂದರ ಸಂದೇಶದ ಬಗ್ಗೆ ಅರಿವು ಮಾಡಿಕೊಟ್ಟರು. ಅದರಲ್ಲೂ, ನಮ್ಮ 'ವಿಕೃತಿ'ಗಳನ್ನು ತೊಡೆದುಹಾಕಿ, ನಮ್ಮ 'ಪ್ರಕೃತಿ'ಯನ್ನು 'ಸಂಸ್ಕೃತಿ'ಯನ್ನಾಗಿ ಮಾಡಿಕೊಳ್ಳುವುದು ಹೇಗೆ ಎಂದು ವಿವರಿಸಿ ಹೇಳಿದರು. ಅನಂತರ ಸುಪ್ರಸಿದ್ಧ ಸಂಗೀತಗಾರರಿಂದ **'ವಿವೇಕಾನಂದ ನಮನ'** ಎನ್ನುವ ಗಾಯನ ಮತ್ತು ವಿವರಣೆಯ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನದ ಊಟವನ್ನು ಎಲ್ಲರಿಗೂ ಏರ್ಪಡಿಸಲಾಗಿತ್ತು. ಇದಾದ ನಂತರ, ಶ್ರೀ ಸೂಲಿಬೆಲೆ ಚಕ್ರವರ್ತಿ ಮತ್ತು ಸಂಗಡಿಗರಿಂದ **'ಜಾಗೋ ಭಾರತ್'** ಎಂಬ ದೇಶಭಕ್ತಿ ಮತ್ತು ರಾಷ್ಟ್ರೀಯ ಭಾವನೆಗಳನ್ನು ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಅಂದು ಸಂಜೆ ೬ ಗಂಟೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಕೆ. ಸೂರ್ಯನಾರಾಯಣ ರಾವ್ ಅವರಿಂದ ವಿಶೇಷ ಉಪನ್ಯಾಸ ಏರ್ಪಾಡಾಗಿತ್ತು. ಸೂರಮಣಿ ಶ್ರೀ ಪ್ರವೀಣ್ ಗೋಡ್ಖಂಡಿ ಅವರ **ಸುಮಧುರ ಕೊಳಲು ವಾದನ**ದೊಂದಿಗೆ ಅಂದಿನ ಕಾರ್ಯಕ್ರಮ ಸುಸಂಪನ್ನವಾಯಿತು.



ಇಡೀ ದಿನ ನಡೆದ ಉತ್ಸವದಲ್ಲಿ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಕುರಿತು ಚಿತ್ರಪ್ರದರ್ಶನ, ಕಂಪ್ಯೂಟರೀಕೃತ ರಸಪ್ರಶ್ನೆ ಕಾರ್ಯಕ್ರಮ, ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯದ ಪ್ರದರ್ಶನ ಮತ್ತು ಮಾರಾಟ – ಇವೆಲ್ಲವೂ ವ್ಯವಸ್ಥೆಗೊಂಡಿದ್ದವು.